# ಶಿಕ್ಷಕರ ಮೌಲ್ಯಮಾಪನ: ವಿದ್ಯಾರ್ಥಿಯ ದೃಷ್ಟಿಯಲ್ಲಿ

ಐಶ್ವರ್ಯಾ ಕಿರಿತ್

ಬಹಳಷ್ಟು ವಿದ್ಯಾವ್ಯವಸ್ಥೆಗಳಲ್ಲಿ ಶಿಕ್ಷಕರ ಮೌಲ್ಯಮಾಪನದ ಮುಖ್ಯ ಉದ್ದೇಶವೆಂದರೆ ಪಾಠಬೋಧನೆಯಲ್ಲಿ ಸುಧಾರಣೆಯನ್ನು ತರುವುದು ಮತ್ತು ಶಿಕ್ಷಕರ ಪ್ರಗತಿಗೆ ಸಹಾಯಮಾಡುವುದು. ಶಿಕ್ಷಕರ ಮೌಲ್ಯಮಾಪನ ಮಾಡಲು ಅಂಗೀಕೃತ ಗಣನಾಂಶಗಳೆಂದರೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಅವರು ಗಳಿಸಿದ ಅಂಕಗಳು, ಬೋಧನೆಯ ಗುಣಮಟ್ಟ ಹಾಗು ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರ ಸಂಬಂಧ. ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ಶಿಕ್ಷಕ ಎಂದರೆ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವವ ಶಿಕ್ಷಕ ಎಂದೇ ಪರಿಗಣಿಸಲಾಗುತ್ತದೆ.

ಒಂದು ವೇಳೆ ಯಾರಾದರೂ ನನಗೆ ಒಂದು ಚೆಕ್‌ಲಿಸ್ಟ್ ಕೊಟ್ಟು ನನ್ನ ಶಿಕ್ಷಕರು ಪರೀಕ್ಷೆಗಳಲ್ಲಿ ನನಗೆ ಅಂಕಗಳನ್ನು ಕೊಟ್ಟ ರೀತಿಯಲ್ಲೇ ಅವರಿಗೆ ನೀನು ಅಂಕಗಳನ್ನು ನೀಡು ಎಂದು ಹೇಳಿದರೆ, ತಕ್ಷಣ ನಾನು ಈ ಅವಕಾಶವನ್ನು ಬಿಡದೇ ಒಪ್ಪಿಕೊಳ್ಳುತ್ತಿದ್ದೆ. ನಂತರ ಅವರು ನೀಡಿದ ಆ ಚೆಕ್‌ಲಿಸ್ಟ್ ಅನ್ನು ಏನು ಮಾಡುವುದು ಎಂದು ಖಂಡಿತ ಗೊಂದಲಕ್ಕೊಳಗಾಗುತ್ತಿದ್ದೆ.

60 ವಿದ್ಯಾರ್ಥಿಗಳಿರುವ ತರಗತಿಯಲ್ಲಿಯ ಒಬ್ಬ ವಿದ್ಯಾರ್ಥಿನಿ ಹೇಗೆ ಶಿಕ್ಷಕರನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನಕ್ಕೊಳಪಡಿಸಬಲ್ಲಳು ಹೇಳಿ?

ಇಲ್ಲಿ ಪರಿಗಣಿಸಬೇಕಾಗಿರುವುದು ನಿರ್ದಿಷ್ಟ ವಿಷಯವನ್ನು ಕುರಿತು ಶಿಕ್ಷಕರಿಗಿರುವ ಉತ್ಕಟಪ್ರೀತಿಯನ್ನೋ ಅಥವಾ ಶಿಕ್ಷಕರ ಶೈಕ್ಷಣಿಕ ಅರ್ಹತೆಯನ್ನೋ ?

ಇತ್ತೀಚಿನವರೆಗೆ ನಾನು, 'ಉತ್ತಮ' ಶಿಕ್ಷಕ ಎಂದರೆ ಪಠ್ಯಪುಸ್ತಕವನ್ನು ನೋಡದೇ ಪಾಠಮಾಡುವ ತರಗತಿಗೆ ಕೈ ಬೀಸಿ ಕೊಂಡು ಬಂದು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಮೋಡಿಮಾಡಬಲ್ಲ ವಿಷಯವನ್ನು ಅರೆದು ಕುಡಿದಿದ್ದ ಶಿಕ್ಷಕ ಎಂದುಕೊಂಡಿದ್ದೆ. ಈಗ ನನಗೆ ತಿಳಿದಿದೆ ಶಿಕ್ಷಕನಾದವನಿಗೆ ನಿಜವಾದ ಸವಾಲು ಇರುವುದು ಕೇವಲ ವಿಷಯದ ಬಗ್ಗೆ ಆಳವಾದ ಜ್ಞಾನ ಪಡೆದುಕೊಳ್ಳುವುದರಲ್ಲಿ ಅಲ್ಲ ಅವನು ಅದನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವ ರೀತಿಯಲ್ಲಿ.

ಆರನೇ ತರಗತಿಯಲ್ಲಿ ನನಗೆ ಇಂಗ್ಲೀಷ್ ಸಾಹಿತ್ಯವನ್ನು ಕಲಿಸುತ್ತಿದ್ದ ಶಿಕ್ಷಕರು ತಾವು ಕಲಿಸುವ ವಿಷಯವನ್ನು ತುಂಬಾ ಪ್ರೀತಿಸುತ್ತಿದ್ದರು ಹಾಗೂ ಅದೇ ಒಲವಿನಿಂದ ನಮಗೆ ಅದನ್ನು ಬೋಧನೆ ಮಾಡುತ್ತಿದ್ದರು. ಅವರು ಅಂದು ಕಲಿಸಿದ ಟೆನಿಸನ್‌ನ 'ಬ್ರೂಕ್' ಮತ್ತು ಮಾರ್ಕ್ ಟ್ವೇನ್‌ನ 'ಟಾಮ್ ಸಾಯರ್' ಇನ್ನೂ ನನ್ನ ಕಿವಿಯಲ್ಲಿ ಅವರದೇ ಧ್ವನಿಯಲ್ಲಿ ಗುಂಯ್‌ಗುಡುತ್ತಿದೆ. ಉಳಿದ ಶಿಕ್ಷಕರಂತೆ ಅವರು ತುಂಬಾ ಉನ್ನತ ವಿದ್ಯಾರ್ಹತೆಯನ್ನೇನೂ ಹೊಂದಿರಲಿಲ್ಲ ಆದರೆ ಉಳಿದ ಯಾವ ಶಿಕ್ಷಕರೂ ನನಗೆ ಎಂಟು ವರ್ಷಗಳವರೆಗೆ ನನ್ನ ಮನಸ್ಸಿನಲ್ಲುಳಿಯುವಂತೆ ಇವರ ರೀತಿಯಲ್ಲಿ ಪಾಠ ಮಾಡಲಿಲ್ಲ.

ಒಬ್ಬ ಶಿಕ್ಷಕನನ್ನು ಆತ ವಿದ್ಯಾರ್ಥಿಗಳಿಗೆ ಎಷ್ಟು ಗಮನನೀಡುತ್ತಾರೆ ಎಂಬ ಆಧಾರದ ಮೇಲೆ ಮೌಲ್ಯಮಾಪನಕ್ಕೊಳಪಡಿಸಬೇಕೇ? ಅಂದರೆ ಕೇವಲ ಹೆಚ್ಚು ಅಂಕಗಳನ್ನು ಪಡೆವ ವಿದ್ಯಾರ್ಥಿಗೆ ಮಾತ್ರವಲ್ಲದೆ, ಕಡಿಮೆ ಅಂಕ ಪಡೆವವರ ಕಡೆಗೂ ಗಮನ ನೀಡಿ ಓದಿನ ಕಡೆ ಉತ್ಸಾಹ ತೋರಿಸದ ಅಂಥ ವಿದ್ಯಾರ್ಥಿಗಳಿಗೂ ಹುರಿದುಂಬಿಸುವುದನ್ನು ನೋಡಿ ಮೌಲ್ಯಮಾಪನ ಮಾಡಬೇಕೆ?

ಹಾಗಿದ್ದರೆ, 8ನೇ ತರಗತಿಯಲ್ಲಿ ನನಗೆ ಗಣಿತ ಬೋಧನೆ ಮಾಡಿದ ಶಿಕ್ಷಕರು ಹೆಚ್ಚು ಅಂಕ ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಯಾಕೆಂದರೆ ನಾನು ಯಾವತ್ತೂ ಗಣಿತದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಿರಲಿಲ್ಲ. ಆದರೆ ನನ್ನ ಶಿಕ್ಷಕರು ನನ್ನ ಕಡೆ ವಿಶೇಷವಾದ ಆಸಕ್ತಿಯನ್ನು ತೋರಿಸಿ, ನಾನು ನಿರ್ಲಕ್ಷ ಮಾಡಿದಾಗ ನನ್ನನ್ನು ಶಿಕ್ಷಿಸಿ, ವರ್ಷದ ಕೊನೆಯಲ್ಲಿ ನಾನು ಗಣಿತದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡಿದರು.

ಆದರೆ 8ನೇ ತರಗತಿಯಲ್ಲಿ ಗಣಿತವನ್ನು ಕುರಿತು ಬೆಳೆಸಿಕೊಂಡಿದ್ದ ಆಸಕ್ತಿಯನ್ನು 9ನೇ ತರಗತಿಯ ತುಂಬಾ ಅನುಭವಿ ಹಾಗೂ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದ ಒಬ್ಬ ಶಿಕ್ಷಕರು ಚಿವುಟಿಹಾಕಿದರು. ಅವರ ಅಂಕ ಆಧಾರಿತ ಬೋಧನೆ, ಒಂದು ಪರಿಕಲ್ಪನೆಯನ್ನು ತರಗತಿಯ ಮಕ್ಕಳು ತಿಳಿದುಕೊಳ್ಳಲಿ ಎನ್ನುವುದಕ್ಕಿಂತ ಪಠ್ಯವನ್ನು ಆದಷ್ಟು ಬೇಗ ಮುಗಿಸಬೇಕೆನ್ನುವ ಅವರ ತರಾತುರಿ, ವೇಗದ ಪಾಠ ಇವು ನನ್ನ ಎಲ್ಲ ಆಸಕ್ತಿಯನ್ನು ಕುಂದಿಸಿಬಿಟ್ಟವು.

ಶಾಲೆಯಲ್ಲಿ, ಶಿಕ್ಷಕರಿಗೆ ಪ್ರತಿಕ್ರಿಯೆ ನೀಡುವ ಪ್ರಶ್ನೆಯೇ ಇರಲಿಲ್ಲ, ಅವರ ಮಾತೇ ಕಾನೂನು ಹಾಗೂ ಯಾರೂ ಕೂಡ ಅವರ ಬೋಧನೆಯ ವಿಧಾನವನ್ನು ಹಾಗೂ ಅವರನ್ನು ಪ್ರಶ್ನಿಸುವ ಹಾಗೆಯೇ ಇರಲಿಲ್ಲ. ಸಾಂಪ್ರದಾಯಿಕ ಭಾರತೀಯ ಶಾಲೆಗಳಲ್ಲಿ ಓದುವ ಯಾವ ಮಕ್ಕಳೂ ಶಿಕ್ಷಕರ ಮೌಲ್ಯಮಾಪನ ಮಾಡುವುದನ್ನು ಕನಸು ಮನಸಿನಲ್ಲೂ ನೆನಸುವಂತಿರಲಿಲ್ಲ ಶಿಕ್ಷಕರನ್ನು ಮೌಲ್ಯಮಾಪನ ಮಾಡುವುದು ಮಹಾಪಾಪ ಎಂಬ ಭಾವನೆ ಇತ್ತು. ಆದರೆ ನನಗನಿಸುತ್ತದೆ ದೇಶದಲ್ಲಿಯ ಎಲ್ಲ ಶಿಕ್ಷಕರಿಗೆ ಇದೊಂದು ಎಚ್ಚರಿಕೆಯ ಕರೆಗಂಟೆ.

ನಮ್ಮಕಾಲದಲ್ಲಿ 'ಶಿಕ್ಷಕರ ಮೌಲ್ಯಮಾಪನ' ಎಂಬ ಮಾತೇ ಇರಲಿಲ್ಲ. ಈಗ ಅದು ಕೇಳಿಬರುತ್ತಿರುವುದರಿಂದ 15 ವರ್ಷ ವಯಸ್ಸಿನ 60ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಯಲ್ಲಿ ಅವರೆಲ್ಲರೂ ಶಿಕ್ಷಕರ ಮೌಲ್ಯಮಾಪನವನ್ನು ವಸ್ತುನಿಷ್ಠವಾಗಿ ಮಾಡುವುದು ಸಾಧ್ಯವಿದೆಯೇ? ಎಂಬ ಪ್ರಶ್ನೆ ನನ್ನಲ್ಲಿ ಮೂಡುತ್ತದೆ

ಪ್ರತಿಯೊಬ್ಬ ಶಿಕ್ಷಕರಿಗೂ ಕೆಲಸದ ಹೊರೆ ಜಾಸ್ತಿ ಇದೆ. ಅಲ್ಲದೆ ತಮಗೆ ನೀಡಲಾಗಿರುವ ಪಠ್ಯವನ್ನು ನಿಗದಿತ ಸಮಯದಲ್ಲಿ ಮುಗಿಸಬೇಕಾಗಿರುತ್ತದೆ. ಈ ಗುರಿಯನ್ನು ಹೊಂದಿರುವ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಕಲಿತಿದ್ದಾರೋ ಇಲ್ಲವೋ ಎಂಬುದನ್ನು ಗಮನಿಸದೇ ತಮ್ಮ ಕೆಲಸವನ್ನು ಮುಗಿಸಬೇಕಾಗಿರುತ್ತದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಅತ್ಯುತ್ತಮ ಶಿಕ್ಷಕ ಎಂದರೆ, ತಮ್ಮ ವಿದ್ಯಾರ್ಥಿಗಳು ಹೆಚ್ಚೆಚ್ಚು ಅಂಕ ಗಳಿಸಲು ತರಬೇತಿ ನೀಡುವವರು ಎಂಬ ನಂಬಿಕೆ ಇದೆ. ಈ ದೇಶದಲ್ಲಿ ಗಳಿಸಿದ ಅಂಕಗಳೇ ಒಬ್ಬ ವಿದ್ಯಾರ್ಥಿಯ ಭವಿಷ್ಯದ ಏಳು–ಬೀಳನ್ನು ನಿರ್ಣಯಿಸುತ್ತಿರುವಾಗ ಬಹುಶಃ ಇದಲ್ಲದೆ ಬೇರೆ ಮಾರ್ಗವಿಲ್ಲ. ವ್ಯವಸ್ಥೆಯು ಈಗ ಬದಲಾಗುತ್ತಿದೆ, ಹೊಸ ಪದ್ಧತಿ, ಹೊಸ ಪಠ್ಯಪುಸ್ತಕ, ರಾಜ್ಯ ಪಠ್ಯಕ್ರಮ ಮತ್ತು ಸಿಬಿಎಸ್‌ಸಿ ಪಠ್ಯಕ್ರಮ ಸೇರ್ಪಡೆ ಮುಂತಾದವುಗಳಿಂದ ಶಿಕ್ಷಕರು ಹೊಸ ಸ್ವರೂಪದ ತರಗತಿಗೆ ತಯಾರಾಗಬೇಕಾದ ಸಮಯ ಬಂದಿದೆ.

ಯಾವುದೇ ಮೌಲ್ಯಮಾಪನ ವ್ಯವಸ್ಥೆಯಾದರೂ ದೊಡ್ಡ ತರಗತಿಗೆ ಸೂಕ್ತವಾಗುವಂತೆ ಮತ್ತು ವಿಭಿನ್ನ ಭಾಷಾ ಹಿಡಿತ ಹಾಗೂ ಶಿಕ್ಷಕರ ಕೆಲಸದ ಹೊರೆ ಇವೆಲ್ಲವನ್ನೂ ಗಮನದಲ್ಲಿರಿಸಿಕೊಂಡು ರಚಿತವಾಗಬೇಕು.

ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಮತ್ತು ಪರಿಣಾಮಕಾರಿ ಹಿಮ್ಮಾಹಿತಿ ಪಡೆಯುವ ಪದ್ಧತಿಯನ್ನು ರೂಪಿಸಲು ಶಿಕ್ಷಕರ ಮೌಲ್ಯಮಾಪನ ನಿಜಕ್ಕೂ ಒಂದು ಅದ್ಭುತ ಪರಿಕಲ್ಪನೆ. ಆದರೆ ಇದು ಎಲ್ಲ ರೀತಿಯ ಶಿಕ್ಷಕರನ್ನೂ ವಸ್ತುನಿಷ್ಠವಾಗಿ ಮೌಲ್ಯಮಾಪನಕ್ಕೊಳಪಡಿಸುವಂತಿದ್ದಾಗ ಮಾತ್ರ ಅದ್ಭುತವಾಗುತ್ತದೆ.

*__ಐಶ್ವರ್ಯ__ ಅವರು ಬೆಂಗಳೂರಿನ ಮೌಂಟ್ ಕಾರಮಲ್ ಕಾಲೇಜಿನ ಕಮ್ಯುನಿಕೇಷನ್ ಸ್ಟಡಿಸ್ ವಿಷಯದ ಎರಡನೇ ವರ್ಷದ ವಿದ್ಯಾರ್ಥಿಯಾಗಿದ್ದಾರೆ. ಅವರನ್ನು aishwaryakirit@gmail.com ನಲ್ಲಿ ಸಂಪರ್ಕಿಸಬಹುದು.*





# ಪರೀಕ್ಷಾ ಸಮಯ

ಪ್ರೇಮ ರಂಗಾಚಾರಿ



ಮೂವರು ಕುರುಡರು ಒಬ್ಬೊಬ್ಬರ ಮಾಹಿತಿಯನ್ನೂ ಒಟ್ಟುಗೂಡಿಸಿ ಆನೆಯನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳಲು ಯತ್ನಿಸಿದ ರೀತಿಗೂ ಶಿಕ್ಷಣ ತಜ್ಞರು ಮಕ್ಕಳ ಬುದ್ಧಿಮತ್ತೆಯನ್ನು ಅವರ ಜ್ಞಾನದ ಬಂಡವಾಳದ ಮೂಲಕ ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೂ ಸಾಮ್ಯತೆ ಇದೆ. ಕಲಿಕಾ ನಿರ್ಧರಣೆ ಹೆಚ್ಚು ಎಂದರೆ ಮಗುವಿನ ಒಟ್ಟಾರೆ ವ್ಯಕ್ತಿತ್ವದ ಒಂದು ಸಣ್ಣ ಭಾಗವನ್ನು ಮಾತ್ರ ತೋರಬಲ್ಲದು.

ಕಲಿಕಾ ನಿರ್ಧರಣೆ ಎಂದು ನಾವು ಏನನ್ನು ಕರೆಯುತ್ತೇವೆ, ಅದು ಒಂದು ಫಲಿತಾಂಶವನ್ನು ಅಳೆಯುವ ಕ್ರಮ. ಇದು ಶಿಕ್ಷಣದಲ್ಲಿ ಆಗುತ್ತಿರುವ ಬೆಳವಣಿಗೆಯ ವಿವಿಧ ಅಂಶಗಳನ್ನು ಪರೀಕ್ಷಿಸಿ ನೋಡುವ ಒಂದು ವಿಧಾನ. ಈ ನಿರ್ಧರಣೆ ವಿದ್ಯಾರ್ಥಿಯ ದೈಹಿಕ, ಭಾವಾನಾತ್ಮಕ ಹಾಗೂ ಬೌದ್ಧಿಕ ಬೆಳವಣಿಗೆಯನ್ನು ಅನಾವರಣಗೊಳಿಸುತ್ತದೆ.

ಕಲಿಕಾ ನಿರ್ಧರಣೆ ಅನ್ನುವುದು ಇಂದು ಅನಪೇಕ್ಷಿತ ಪದವಾಗಿದೆ. ಪರೀಕ್ಷೆಯ ನಿರೀಕ್ಷಿತ ಗುರಿ ತಲುಪಲು ಏನಕೇನ ಪ್ರಯತ್ನಿಸುವ ಮಕ್ಕಳು, ಹೆತ್ತವರು, ಮತ್ತು ಶಿಕ್ಷಕರ ಸುಸ್ತೆದ್ದ ಚಿತ್ರ ನಮ್ಮ ಕಣ್ಣೆದುರು ಬರುತ್ತದೆ. ಈ ಪರೀಕ್ಷೆ ಎಂಬುದು ಮಕ್ಕಳ ಬಗ್ಗೆ ತೀರ್ಪು ನೀಡಿ ಠಸ್ಸೆ ಹೊಡೆಯುವ ವಿಧಾನ ಅನ್ನಿಸಿದೆ. ಜೀವಮಾನಪೂರ್ತಿ ಅವರು ಈ ಮಾಯದ ಗಾಯದ ಕಲೆಯಿಂದ ನರಳಲೂಬಹುದು. ಹೀಗಾಗಿ, ಮಕ್ಕಳನ್ನು ಇನ್ನೂ ಚೆನ್ನಾಗಿ ಆರ್ಥ ಮಾಡಿಕೊಳ್ಳುವ ಸಾಧನವಾಗಬೇಕಾದ, ಅವರನ್ನು ಇನ್ನೂ ಚೆನ್ನಾಗಿ ಕಲಿಯುವಂತೆ ಹುರಿದುಂಬಿಸಬೇಕಾದ; ಅವರ ವೈಯಕ್ತಿಕ ಅಗತ್ಯಕ್ಕೆ ತಕ್ಕಂತೆ ರೂಪಿಸಬಹುದಾದ ಈ ಕಲಿಕಾ ನಿರ್ಧರಣೆ ಇಂದು ನಮ್ಮ ಶಿಕ್ಷಣ ಕ್ಷೇತ್ರದ ಶಾಪವಾಗಿ ಪರಿಣಮಿಸಿದೆ.

ಈ ನಿಟ್ಟಿನಲ್ಲಿ ತರುವ ಬದಲಾವಣೆ ಕಲಿಕಾ ಪ್ರಕ್ರಿಯೆಯ ದೃಷ್ಟಿಕೋನದಲ್ಲೂ ಬದಲಾವಣೆ ತರಬಹುದು. ಈ ದೃಷ್ಟಿಕೋನದ ಬದಲಾವಣೆ ವಿದ್ಯಾರ್ಥಿಯ ಅಗತ್ಯಗಳನ್ನು ಗಮನಿಸಲು ಸಹಾಯ ಮಾಡಬಹುದು. ಮುಂದಿನ ನಿರೀಕ್ಷಿತ ಗುರಿಯೆಡೆಗೆ ಸಾಗಲು ಈ ಧೋರಣೆಯ ಬದಲಾವಣೆ ಮುಖ್ಯ.

*'ಕಲ್ಪನೆಯು ಜ್ಞಾನಕ್ಕಿಂತ ಮುಖ್ಯ. ಜ್ಞಾನಕ್ಕೆ ಮಿತಿಯಿದೆ. ಆದರೆ, ಕಲ್ಪನೆ ಇಡೀ ಪ್ರಪಂಚವನ್ನೇ ಆವರಿಸುತ್ತದೆ. ಅಭಿವೃದ್ಧಿಯನ್ನು ಪ್ರಚೋದಿಸುತ್ತಾ, ವಿಕಾಸಕ್ಕೆ ಜನ್ಮ ನೀಡುತ್ತದೆ'. – ಆಲ್ಬರ್ಟ್ ಐನ್‌ಸ್ಟೈನ್*

ಕಲಿಕಾ ನಿರ್ಧರಣೆ ಸಾದರಪಡಿಸುವ ವಿವರಗಳು ಶಿಕ್ಷಕ ಮತ್ತು ವಿದ್ಯಾರ್ಥಿ ಇಬ್ಬರಿಗೂ – ತಮ್ಮನ್ನು ಮತ್ತು ಪರಸ್ಪರ ಅಳೆಯುವ ಪ್ರತಿಸ್ಪಂದನವಾಗಿ ಒದಗಿ ಬಂದರೆ ಮಾತ್ರ ಇದು ಅರ್ಥಪೂರ್ಣ. ಬೋಧನೆ, ಕಲಿಕೆ ಎರಡನ್ನೂ ಸುಧಾರಿಸುವತ್ತ ಇದು ಕೊಡುಗೆ ನೀಡಬೇಕು. ಇಂಥಾ ಕಲಿಕಾ ನಿರ್ಧರಣೆ ರೂಪಣ ಕಲಿಕಾ ನಿರ್ಧರಣೆಯಾಗಿ ರೂಪಾಂತರಗೊಂಡು ಅದು ನೀಡುವ ಪುರಾವೆಗಳ ಮೂಲಕ ಕಲಿಕೆಯ ಅಗತ್ಯಕ್ಕೆ ತಕ್ಕಂತೆ ಬೋಧನೆಯನ್ನು ರೂಪಿಸಿಕೊಳ್ಳಬಹುದು.

ಕಲಿಕೆ ಮತ್ತು ಸಾಧನೆಯನ್ನು ಯಾಕೆ ನಾವು ಮಾಪನ ಮಾಡಬೇಕು? ಇದರಿಂದ ಯಾರಿಗೆ ಲಾಭ?

ಈ ಮೌಲ್ಯಮಾಪನದ ಕೇಂದ್ರದಲ್ಲಿ ವಿದ್ಯಾರ್ಥಿ ಇದ್ದಾನೆ. ಆದರೆ, ಶಿಕ್ಷಕರು, ವಿಷಯಗಳ ವಿಶೇಷಜ್ಞರು ಶಾಲೆಗಳು ಮತ್ತು ವಿದ್ಯಾ ಸಂಸ್ಥೆಗಳೂ ಇದರಿಂದ ಅನುಕೂಲ ಪಡೆಯುತ್ತಾರೆ.

ಕಲಿಕೆ ಮತ್ತು ಸಾಧನೆಯನ್ನು ಅಳೆಯುವುದರಿಂದ ಏನು ಲಾಭ?

1. ಕಲಿಕೆ ಮತ್ತು ಸಾಧನೆಯ ನಡುವೆ ಇರುವ ಅಂತರವನ್ನು ಗುರುತಿಸಲು ಅನುಕೂಲ.
2. ಕಲಿಕೆಯನ್ನು ಅಳತೆ ಮಾಡಬಹುದು ಮತ್ತು ಇನ್ನೂ ಚೆನ್ನಾಗಿ ಸಾಧಿಸಲು ಬೇಕಾದ ಮಾರ್ಗೋಪಾಯಗಳನ್ನು ತೋರಿಸಬಲ್ಲದು.
3. ಮುಂದಿನ ಹಂತಕ್ಕೆ ಹೋಗಲು ವಿದ್ಯಾರ್ಥಿಯನ್ನು ಸಜ್ಜುಗೊಳಿಸುತ್ತದೆ.
4. ಹೆಚ್ಚಿನ ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ಬೆಂಬಲಿಸುತ್ತದೆ.
5. ಬೋಧನಾ ತಂತ್ರೋಪಾಯಗಳ ಮರುವಿನ್ಯಾಸಕ್ಕೆ ಪ್ರತಿಸ್ಪಂದನ ಸಹಾಯ ಮಾಡುತ್ತದೆ.